





# ಕಡಲೇ ಸಂಪತ್ತು

**ಕಲಾವಿದ ಸಂಪತ್ ಕುಮಾರ್ ಪಾಂಗಾಳ ಅವರು ಮೀನಿನ ಚಿಪ್ಪುಗಳಲ್ಲಿ ತೋರಿರುವ ಕೈಚಳಕ ಬೆರಗು ಮೂಡಿಸುವಂಥದ್ದು. ಅವರು ರೂಪಿಸಿರುವ ಉಬ್ಬುಶಿಲ್ಪಗಳು ನೋಡುಗರ ಮನಸೆಳೆಯುತ್ತವೆ.**

**■ ಜೀವನ್ ಶೆಟ್ಟಿ**



ಅಸಂಖ್ಯಾತ ಜೀವಿಗಳನ್ನು ತನ್ನ ಒಡಲಲ್ಲಿಟ್ಟುಕೊಂಡಿರುವ ಸಮುದ್ರವೇ ಪ್ರಕೃತಿಯ ಒಂದು ಸುಂದರ ಕಲಾಕೃತಿ. ಆ ಸಮುದ್ರದಲ್ಲಿ ಸಿಗುವ ನಿಸರ್ಗನಿರ್ಮಿತ ವಸ್ತುಗಳನ್ನು ಬಳಸಿಕೊಂಡು ವಿಶೇಷವಾದ ಕಲಾಕೃತಿಗಳನ್ನು ಮೂಡಿಸಿದವರು ಸಂಪತ್ ಕುಮಾರ್ ಪಾಂಗಾಳ.

ಸಾಮಾನ್ಯವಾಗಿ ಕಡಲ ತೀರದಲ್ಲಿ ಕಂಡುಬರುವ ಕಟಲ್ ಬೋನ್ (ಬೊಂಡಾಸ್ ಮೀನಿನ ಚಿಪ್ಪು)ಗಳನ್ನು ಸಂಗ್ರಹಿಸಿದ್ದ ಅವರಿಗೆ ಅವುಗಳಲ್ಲಿ ಕೈಚಳಕ ತೋರಿಸಬೇಕೆನಿಸಿತ್ತು. ಹೀಗಾಗಿ ಆ ಚಿಪ್ಪುಗಳಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಿದ್ದು, ಒಂದಕ್ಕಿಂತ ಒಂದು ಸುಂದರವಾಗಿ ಮೂಡಿಬಂದಿವೆ.

ಶಿಕ್ಷಕರಾಗಿದ್ದ ಪಾಂಗಾಳ ಅವರು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ಹಲವು ಕಲಿಕಾ ಮಾದರಿಗಳನ್ನು ರಚಿಸುತ್ತಿದ್ದರು. ಮಾನವ ಮೂಳೆಗಳು ಮತ್ತು ಅಸ್ಥಿಪಂಜರಗಳ ಮಾದರಿಗಳನ್ನು ಅಂಗರಚನಾಶಾಸ್ತ್ರದ ಪುಸ್ತಕವನ್ನು ಆಧರಿಸಿ ರಚಿಸಿದ್ದರು. ಇದಕ್ಕಾಗಿ ರಾಜ್ಯ ಸರ್ಕಾರ ಅವರಿಗೆ 'ಉತ್ತಮ ಕಲಿಕಾ ಸಾಮಗ್ರಿ ಪ್ರಶಸ್ತಿ' ನೀಡಿ ಗೌರವಿಸಿತ್ತು. ಅಧ್ಯಯನ ಸಾಮಗ್ರಿಗಳ ಹೊರತಾಗಿ ಅಂಥ ಪ್ರಯೋಗಗಳನ್ನು ಕಲಾ ಮಾಧ್ಯಮದಲ್ಲಿಯೂ ಮಾಡಬೇಕೆಂಬ ಆಲೋಚನೆ ಅವರಲ್ಲಿ ಅದಾಗಲೇ ಮೂಡಿತ್ತು.

ಕಡಲ ತೀರದ ಸಮೀಪವಿದ್ದ ಶಾಲೆಯಲ್ಲಿ ಕಲಿಸುತ್ತಿದ್ದ ಅವರು, ಮಕ್ಕಳು ಕಡಲ ಚಿಪ್ಪುಗಳು, ಕಪ್ಪೆ ಚಿಪ್ಪು, ಮೀನಿನ ಚಿಪ್ಪುಗಳೊಂದಿಗೆ ಆಟವಾಡುವುದನ್ನು ಗಮನಿಸಿದ್ದರು. ಆ ಕಡಲ ವಸ್ತುಗಳಲ್ಲಿಯೇ ಕಲಾಕೃತಿಗಳನ್ನು ಮೂಡಿಸುವ ಪ್ರಯೋಗಕ್ಕೆ ಮುಂದಾದರು.

ಕಟಲ್ ಬೋನನ್ನು 'ಸಮುದ್ರ ನಾಲಿಗೆ' ಎಂದೂ ಕರೆಯುತ್ತಾರೆ. ಇದನ್ನೇ ತಮ್ಮ ಕಲೆಗೆ ಪೂರಕವಾಗಿ ಬಳಸಿಕೊಂಡು ಪುಟ್ಟ ಪುಟ್ಟದಾಗಿ ಉಬ್ಬುಶಿಲ್ಪಗಳನ್ನು



ಕೆತ್ತಿದ್ದಾರೆ. ಸಮುದ್ರ ನಾಲಿಗೆಗಳು ಸಣ್ಣ ಗಾತ್ರದಲ್ಲಿ ಇರುತ್ತವೆ. ಹೀಗಾಗಿ ಕೆಲವು ಉಬ್ಬುಶಿಲ್ಪಗಳನ್ನು ಮಿನಿಯೇಚರ್‌ಗಳಂತೆ ಕೆತ್ತಿದ್ದಾರೆ. ಈ ಚಿಕ್ಕ ಚಿಕ್ಕ ಸಮುದ್ರ ನಾಲಗೆಗಳನ್ನು ಜೋಡಿಸುವ ಮೂಲಕ ದೊಡ್ಡ ಕಲಾಕೃತಿಗಳನ್ನೂ ರಚಿಸಿದ್ದಾರೆ.

ಬಹಳ ಸೂಕ್ಷ್ಮ ಕೆತ್ತನೆಯಲ್ಲಿ ತಾಯಿ ಮಗು, ಶಿವ, ಬುದ್ಧ, ದೋಣಿ ಪಯಣ, ಅಸ್ಥಿಪಂಜರ, ಬೆನ್ನುಹುರಿ, ಕೈ ಬೆರಳುಗಳು, ಕಡಲ್ಗುದುರೆ ಮತ್ತಿತರ ಜಲಚರಗಳು ಮೂಡಿಬಂದಿವೆ. ಬಳಪದ ಕಲ್ಲಿನಲ್ಲಿ ಕೊರೆದಿರುವಂತೆ ಈ ಕಲಾಕೃತಿಗಳು ಸುಂದರವಾಗಿ ಕಾಣುತ್ತವೆ. ಈ ಕಲಾಕೃತಿಗಳನ್ನು ತಮ್ಮ ಮನೆಯ ಗ್ಯಾಲರಿಯಲ್ಲಿಯೂ ಇಟ್ಟಿದ್ದು, ಇತ್ತೀಚೆಗೆ ಉಡುಪಿ ಮತ್ತು ಮಂಗಳೂರಿನಲ್ಲಿ 30 ಕಲಾಕೃತಿಗಳ ಪ್ರದರ್ಶನ ಏರ್ಪಡಿಸಿದ್ದಾರೆ. ಕಲಾಕೃತಿಗಳ ಮಾರಾಟದಿಂದ ಬಂದ ಹಣವನ್ನು ಕನ್ನಡ ಮಾಧ್ಯಮ ಗ್ರಾಮೀಣ ಶಾಲೆಗಳ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ನಿಘಂಟುಗಳನ್ನು ವಿತರಿಸಲು ಬಳಸಿದ್ದಾರೆ.

ಶಿಕ್ಷಕ ವೃತ್ತಿಯಿಂದ ಇತ್ತೀಚೆಗೆ ನಿವೃತ್ತಿ ಹೊಂದಿದ ಅವರು, ಉಡುಪಿಯ ಆರ್ಟಿಸ್ಟ್ ಫೋರಂ ಎಂಬ ಸಂಸ್ಥೆಯ ಕಾರ್ಯದರ್ಶಿಯಾಗಿ ಕಲಾ ಕಾರ್ಯಕ್ರಮಗಳನ್ನು ಸಂಘಟಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ■